3. ರಾಮ್ ಕೋ - ಇಂಡಸ್ಟ್ರೀಸ್ ಬನ್ನೂರು, ಟಿ.ನರಸೀಪುರ ತಾ: ಮೈಸೂರು ಜಿಲ್ಲೆ
4. ದಾಲ್ಮಿಯಾ ಸಿಮೆಂಟ್ಸ್ (ಭಾರತ್) ಲಿಮಿಟೆಡ್, ಮತ್ತಂಗಿ ಹುಮ್ನಾಬಾದ್ ತಾ:, ಬೀದರ್ ಜಿಲ್ಲೆ

ಇ. ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುವ ಪ್ರಸ್ತಾವನೆಗಳು :

1. ಕೃಷ್ಣ ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ತೆರದಾಳ್, ಜಖಮಂಡಿ ತಾ: ಬಿಜಾಪುರ ಜಿಲ್ಲೆ

ಖಾಸಗಿ ಕ್ಷೇತ್ರ :

2. ಮೈಸೂರು ಫ್ರೂಟ್ ಪ್ರಾಡಕ್ಟ್ಸ್ ಲಿಮಿಟೆಡ್, ಬನ್ನೂರು ಟಿ. ನರಸೀಪುರ ತಾ : ಮೈಸೂರು ಜಿಲ್ಲೆ
3. ಕರ್ನಾಟಕ ಬ್ರೀವರೀಸ್ ಅಂಡ್ ಡಿಸ್ಟಲರೀಸ್, ಚೆನ್ನಗಿರಿ, ಶಿವಮೊಗ್ಗ ಜಿಲ್ಲೆ
4. ಮುಧೋಳ್ ಶುಗರ್ಸ್ (ಲಿ) ಮುಧೋಳ್, ಬಿಜಾಪುರ ಜಿಲ್ಲೆ
5. ಜುವಾರಿ ಆಗ್ರೋ ಕೆಮಿಕಲ್ಸ್ (ಲಿ) ಹಳ್ಳಿಖೇಡ್ ಹುಮ್ನಾಬಾದ್ ತಾ: ಬೀದರ್ ಜಿಲ್ಲೆ
6. ಕೊಪ್ಪ ಶುಗರ್ಸ್ (ಲಿ) ಮದ್ದೂರು ತಾ: ಮಂಡ್ಯ ಜಿಲ್ಲೆ

ವಿಷಯ : ಚಿಕ್ಕಮಗಳೂರು ಜಿಲ್ಲೆಯಲ್ಲಿನ ಕೊಳಚೆ ಪ್ರದೇಶಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 719(860)

ಶ್ರೀ.ಸಿ.ಆರ್. ಸಗೀರ್ ಅಹಮದ್(ಚಿಕ್ಕಮಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸರ್ಕಾರ ಎಷ್ಟು ಕೊಳಚೆ ಪ್ರದೇಶಗಳನ್ನು ಗುರುತಿಸಿದೆ?

ಆ. ಇಲ್ಲಿಯವರೆಗೆ ಈ ಕೊಳಚೆ ಪ್ರದೇಶಗಳಿಗೆ ವೆಚ್ಚವಾಗಿದ್ದ ಹಣವೆಷ್ಟು?

ಇ. ಈ ವರ್ಷದಲ್ಲಿ ಯಾವುದಾದರೂ ಹೊಸ ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆಯೇ?

ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ. 47 ಕೊಳಚೆ ಪ್ರದೇಶಗಳನ್ನು ಮಂಡಳಿಯು ಗುರುತಿಸಿದೆ.

ಆ. 1994 ಅಂತ್ಯದವರೆಗೆ ಒಟ್ಟು 67.57 ಲಕ್ಷ ರೂ.ಗಳನ್ನು ಮೂಲಭೂತ ಸೌಲಭ್ಯ ಒದಗಿಸಲು ಖರ್ಚು ಮಾಡಲಾಗಿದೆ

ಇ. 1994-95ರಸಾಲಿನಲ್ಲಿ 5 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ.